## ನಿಗಮವು ನೀಡುತ್ತಿರುವ ರಿಯಾಯಿತಿ ವಿವರಗಳು
## [ಸೆಕ್ಷನ್ 4(1) (ಬಿ) (13)]

**ಉಚಿತ/ರಿಯಾಯಿತಿ ವಿವರಗಳು:**

1. **ವಿದ್ಯಾರ್ಥಿ ರಿಯಾಯಿತಿ ಬಸ್‌ಪಾಸ್**: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ವಿದ್ಯಾರ್ಥಿ ಸಮುದಾಯದ ಹಿತದೃಷ್ಟಿಯಿಂದ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ಬಹು ದೊಡ್ಡ ಪ್ರಮಾಣದಲ್ಲಿ ವಿತರಿಸುತ್ತಿದೆ. ರಿಯಾಯಿತಿ ಪ್ರಮಾಣವು ಶೇ.೮೦ ರಷ್ಟಿರುತ್ತದೆ. ವಾಸಸ್ಥಳದಿಂದ ಶಾಲಾ-ಕಾಲೇಜಿನ ಮಧ್ಯೆ 60 ಕಿ.ಮೀ ಅಂತರದವರೆಗೂ ಈ ರಿಯಾಯಿತಿ ಪಾಸ್ ಸೌಲಭ್ಯವನ್ನು ನೀಡಲಾಗುತ್ತಿದೆ.

2. **ವಿಕಲಚೇತನರಿಗೆ ರಿಯಾಯಿತಿ ದರದ ಬಸ್‌ಪಾಸ್**: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ವಿಕಲಚೇತನರಿಗೆ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ನೀಡುತ್ತಿದೆ. ವಿಕಲಚೇತನರು ತಮ್ಮ ವಾಸಸ್ಥಳದಿಂದ ವಿಳಾಸದಿಂದ 100 ಕಿ.ಮೀ ವ್ಯಾಪ್ತಿಯಲ್ಲಿ ನಿಗಮದ ನಗರ ಸಾರಿಗೆ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶವಿದೆ. ವಿಕಲಚೇತನರು ವರ್ಷಕ್ಕೆ ರೂ.660/- ಮೊತ್ತ ಪಾವತಿಸಿ ಈ ಪಾಸನ್ನು ಪಡೆಯಬಹುದಾಗಿದೆ.

3. **ಅಂಧರ ಉಚಿತ ಬಸ್‌ಪಾಸ್**: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಅಂಧರಿಗೆ ಉಚಿತ ಬಸ್‌ಪಾಸ್‌ಗಳನ್ನು ನೀಡುತ್ತಿದೆ. ರಾಜ್ಯದೊಳಗೆ ಎಲ್ಲಿಂದ ಎಲ್ಲಿಗಾದರೂ ನಿಗಮದ ನಗರ, ನಗರ ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿದೆ.

4. **ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್‌ಪಾಸ್**: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್‌ಪಾಸ್‌ಗಳನ್ನು ನೀಡುತ್ತಿದೆ. ರಾಜ್ಯದೊಳಗೆ ಮತ್ತು ಅಂತರಾಜ್ಯ ಪ್ರಯಾಣ ಸೇರಿದಂತೆ ರಾಜಹಂಸ ಮತ್ತು ಮಲ್ಟಿ ಆಕ್ಸೆಲ್, ಸ್ಲೀಪರ್ ಎ.ಸಿ., ಸಹಿತ ಎಲ್ಲಾ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿದೆ. 75 ವರ್ಷ ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ಸ್ವಾತಂತ್ರ್ಯ ಹೋರಾಟಗಾರರು ಸಹಾಯಕರೊಬ್ಬರೊಂದಿಗೆ ಪ್ರಯಾಣಿಸಬಹುದಾಗಿದೆ.

5. **ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರಿಗೆ ಉಚಿತ ಕೂಪನ್**: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರಿಗೆ ಉಚಿತವಾಗಿ ವರ್ಷಕ್ಕೆ ರೂ.2000/- ಮೌಲ್ಯದ ಕೂಪನ್‌ಗಳನ್ನು ನೀಡಲಾಗುತ್ತಿದ್ದು, ಈ ಕೂಪನ್‌ಗಳನ್ನು ಆಯಾ ವರ್ಷವೇ ಬಳಸಬೇಕಿದೆ.

6. **60 ಹಾಗೂ ಅದಕ್ಕೂ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರಿಗೆ ಶೇ.25ರಷ್ಟು ಪ್ರಯಾಣದರ ರಿಯಾಯಿತಿ**:

60 ವರ್ಷ ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರಿಗೆ ನಿಗಮದ ರಾಜಹಂಸ ಮತ್ತು ಅದಕ್ಕೂ ಕಡಿಮೆ ದರ್ಜೆಯ ಅಂತರರಾಜ್ಯ ಸಹಿತ ಎಲ್ಲಾ ಬಗೆಯ ಬಸ್ಸುಗಳಲ್ಲಿ ಪ್ರಯಾಣ ದರದಲ್ಲಿ ಶೇ.25ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಹಿರಿಯ ನಾಗರೀಕರು ಈ ಕೆಳಕಂಡ ಯಾವುದಾದರೂ ಒಂದನ್ನು ವಯಸ್ಸಿನ ದಾಖಲಾತಿಗಾಗಿ ತೋರಿಸಬಹುದಾಗಿದೆ.

1. ಮೂಲ ಚಾಲನಾ ಪರವಾನಗೆ (ಡ್ರೈವಿಂಗ್ ಲೈಸೆನ್ಸ್),

2.ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ನಿರ್ದೇಶನಾಲಯ ದವರು ವಿತರಿಸಿರುವ ಭಾವಚಿತ್ರವಿರುವ ಗುರುತಿನ ಚೀಟಿ (60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ),

3.ರಾಜ್ಯ ಚುನಾವಣಾ ಆಯೋಗದವರು ನೀಡಿರುವ ಗುರುತಿನ ಚೀಟಿ (ವೋಟರ್ಸ್ಐ.ಡಿ)

4.ಕೇಂದ್ರ ಸರ್ಕಾರದ ಪಾಸ್‌ಪೋರ್ಟ್

5.ನಿಗಮ ವಿತರಿಸುವ ಗುರುತಿನ ಚೀಟಿ

**7. ಹಾಲಿ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಹಾಗೂ ಮಾಜಿ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಉಚಿತ ಬಸ್‌ಪಾಸ್:**

ಹಾಲಿ ವಿಧಾನ ಸಭಾ ಸದಸ್ಯರು (ಎಂಎಲ್ಎ) ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ (ಎಂಎಲ್‌ಸಿ) ನಿಗಮದ ಯಾವುದೇ ಬಸ್ಸಿನಲ್ಲಿ ಅವರೊಬ್ಬರು ಮಾತ್ರ ಪ್ರಯಾಣಿಸಲು "ಗೋಲ್ಡ್‌ಕಾರ್ಡ್" ಮಾದರಿಯ ಪಾಸನ್ನು ನೀಡಲಾಗಿದೆ.

ಮಾಜಿ ಎಂ.ಎಲ್.ಎ ಮತ್ತು ಮಾಜಿ ಎಂ.ಎಲ್.ಸಿ ಗಳಿಗೆ ಅವರ ಒಬ್ಬ ಸಹಾಯಕರೊಂದಿಗೆ ಅಂತರಾಜ್ಯ ಪ್ರಯಾಣವೂ ಸೇರಿದಂತೆ ನಿಗಮದ ಎಲ್ಲಾ ಬಗೆಯ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಪಾಸ್ ನೀಡಲಾಗಿದೆ. ಸದರಿ ಮಾಜಿ ಎಂ.ಎಲ್.ಎ/ಎಂ.ಎಲ್.ಸಿ ಬಸ್ ಪ್ರಯಾಣದ ಬಗ್ಗೆ ಇಟಿಎಂ/ಮಾರ್ಗ ಪತ್ರದಲ್ಲಿ ತಪ್ಪದೇ ಪೂರ್ಣ ಮಾಹಿತಿ ದಾಖಲಿಸಬೇಕು.

**8. ಮಾನ್ಯತೆ ಪಡೆದ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ (ಸ್ಮಾರ್ಟ್‌ಕಾರ್ಡ್):** ಮಾನ್ಯತೆ ಪಡೆದ ಬೆಂಗಳೂರು ನಗರ ಹಾಗೂ ಜಿಲ್ಲಾ ಪತ್ರಕರ್ತರು ರಾಜ್ಯಾದ್ಯಂತ ನಿಗಮಗಳ ಯಾವುದೇ ವರ್ಗದ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಕೂಲವಾಗುವಂತೆ ಬಸ್‌ಪಾಸ್ ನೀಡಲಾಗುತ್ತಿದೆ.

**9. ಅರ್ಜುನ್ ಪ್ರಶಸ್ತಿ ಹಾಗೂ ಒಲಂಪಿಯನ್ ಮತ್ತು ಪ್ಯಾರ ಒಲಂಪಿನ್ ಪ್ರಶಸ್ತಿ ವಿಜೇತರಿಗೆ ಉಚಿತ ಪ್ರಯಾಣದ ಸೌಲಭ್ಯ:** ಅರ್ಜುನ್ ಪ್ರಶಸ್ತಿ ಹಾಗೂ ಒಲಂಪಿಯನ್ ಮತ್ತು ಪ್ಯಾರ ಒಲಂಪಿನ್ ಪ್ರಶಸ್ತಿ ವಿಜೇತರು ಉಚಿತವಾಗಿ ನಿಗಮದ ನಗರ, ನಗರ ಹೊರವಲಯ, ಸಾಮಾನ್ಯ, ವೇಗದೂತ, ರಾಜಹಂಸ ಮತ್ತು ವೋಲ್ವೋ (ಐರಾವತ) ಬಸ್ಸುಗಳಲ್ಲಿ ಪ್ರಯಾಣಿಸಲು ಬಸ್‌ಪಾಸ್ ನೀಡಲಾಗಿದೆ.

**10. ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಹಾಗೂ ಜಿಲ್ಲಾ ಅಧ್ಯಕ್ಷರುಗಳಿಗೆ ಉಚಿತ ಪ್ರಯಾಣದ ಸೌಲಭ್ಯ:** ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಹಾಗೂ ಜಿಲ್ಲಾ ಅಧ್ಯಕ್ಷರುಗಳು ಉಚಿತವಾಗಿ ನಿಗಮದ ನಗರ, ನಗರ ಹೊರವಲಯ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಲು ಬಸ್‌ಪಾಸ್ ನೀಡಲಾಗಿದೆ.

**11. ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ ಉಚಿತ ಬಸ್‌ಪಾಸ್:** ಭಾರತ ಸರ್ಕಾರದಿಂದ ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ 18 ವರ್ಷ ತುಂಬುವವರೆಗೆ ನಿಗಮದ ನಗರ, ನಗರ ಹೊರವಲಯ, ಸಾಮಾನ್ಯ, ವೇಗದೂತ ಮತ್ತು ರಾಜಹಂಸ ವಾಹನಗಳಲ್ಲಿ ರಾಜ್ಯಾದ್ಯಂತ ಪ್ರಯಾಣಿಸಲು ಉಚಿತ ಬಸ್‌ಪಾಸ್ ನೀಡಲಾಗಿದೆ.

12. **ರಾಷ್ಟ್ರ ಪ್ರಶಸ್ತಿ ಪುರಸ್ಕೃತರಿಗೆ ಉಚಿತ ಬಸ್‌ಪಾಸ್**: ರಾಷ್ಟ್ರ ಪ್ರಶಸ್ತಿ ಪುರಸ್ಕೃತರು ಅಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಹಿತಿ/ಕಲಾವಿದರಿಗೆ ಸಂಬಂಧಿಸಿದ ರಾಷ್ಟ್ರ ಪ್ರಶಸ್ತಿ ವಿಜೇತ ಗಣ್ಯರಿಗೆಉಚಿತ ಬಸ್‌ಪಾಸ್ ನೀಡಲಾಗುತ್ತಿದೆ. ಈ ಬಸ್‌ಪಾಸ್ ಬಳಸಿ ನಿಗಮದ ವೋಲ್ವೋ ಸಹಿತ ಎಲ್ಲಾ ಬಗೆಯ ಬಸ್ಸುಗಳಲ್ಲಿ ರಾಜ್ಯಾದ್ಯಂತ ಮತ್ತು ನಿಗಮದ ಅಂತರರಾಜ್ಯ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ. ರಾಷ್ಟ್ರ ಪ್ರಶಸ್ತಿ ಪಡೆದವರು ಬಸ್ಸಿನಲ್ಲಿ ಪ್ರಯಾಣಿಸುವಾಗ ಅವರ ಪ್ರಯಾಣದ ಬಗ್ಗೆ ಇಟಿಎಂ ನಲ್ಲಿ ಮಾಹಿತಿ ದಾಖಲಿಸುವುದು.

13. **ಹುತಾತ್ಮ ಯೋಧರ ಅವಲಂಬಿತರ ಉಚಿತ ಪಾಸ್:** ಯುದ್ಧ/ರಾಷ್ಟ್ರ ರಕ್ಷಣೆಯಂತಹ ಕಾರ್ಯದಲ್ಲಿ ತೊಡಗಿ ವೀರ ಮರಣ ಹೊಂದಿದಂತಹ ಹುತಾತ್ಮ ಯೋಧರ ಅವಲಂಬಿತರಿಗೆ (ತಂದೆ, ತಾಯಿ, ಹೆಂಡತಿ ಹಾಗೂ ಅವಲಂಬಿತ ಮಕ್ಕಳು) 10 ವರ್ಷಗಳ ಅವಧಿಗೆ ಉಚಿತ ಬಸ್ ಪಾಸ್ ವಿತರಿಸಲಾಗುತ್ತಿದೆ.

14. **ಪೊಲೀಸ್ ಮೋಟಾರ್ ವಾರೆಂಟ್**: ಪೊಲೀಸ್ ಮೋಟಾರ್ ವಾರೆಂಟ್‌ನ್ನು ಬಳಸಿ ಪೊಲೀಸ್ ಪೇದೆಗಳು ನಿಗಮದ ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿದೆ. ಎಸ್.ಐ ಮತ್ತು ಮೇಲ್ಪಟ್ಟ ವರ್ಗದ ಪೊಲೀಸನವರು ರಾಜಹಂಸ ಬಸ್ಸುಗಳಲ್ಲಿ ಪೊಲೀಸ್ ವಾರೆಂಟ್ ಬಳಸಿ ಪ್ರಯಾಣಿಸಬಹುದಾಗಿದೆ. ಹವಾ ನಿಯಂತ್ರಿತ (ವೋಲ್ವೋ) ಬಸ್ಸುಗಳಲ್ಲಿ ಪೊಲೀಸ್ ಮೋಟಾರ್ ವಾರೆಂಟ್‌ನ್ನು ಅನುಮತಿಸುವಂತಿಲ್ಲ.

15. **ಮಾಸಿಕ ಬಸ್‌ಪಾಸ್**: ಮಾಸಿಕ ಬಸ್‌ಪಾಸ್ ದರವನ್ನು ಸಾಮಾನ್ಯ ಸಾರಿಗೆಯ 20 ದುಂಡು ಸುತ್ತುಗಳ ಸಾಮಾನ್ಯ ದರದ ಮೇಲೆ ಹಂತಕ್ಕನುಗುಣವಾಗಿ ವಿತರಿಸಲಾಗುತ್ತಿದೆ. ಸದರಿ ಮಾಸಿಕ ಬಸ್‌ಪಾಸ್‌ನ್ನು ನಿಗಮದ ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿದೆ.

16. **ಸಂಯುಕ್ತ/ದೈನಿಕ ಬಸ್‌ಪಾಸ್**: ಬೆಂಗಳೂರು ಸುತ್ತಮುತ್ತಲಿನ ಪ್ರಯಾಣಿಕರ ಅನುಕೂಲಕ್ಕಾಗಿ ಕ.ರಾ.ರ.ಸಾ. ನಿಗಮ ಮತ್ತು ಬೆಂ.ಮ.ಸಾ. ಸಂಸ್ಥೆಯಲ್ಲಿ ಪ್ರಯಾಣಿಸಲು ಸಂಯುಕ್ತ ದೈನಿಕ ಬಸ್‌ಪಾಸ್‌ನ್ನು ವಿತರಿಸಲಾಗುತ್ತಿದೆ. ಈ ಪಾಸನ್ನು ಬಳಸಿ ಬೆಂ.ಮ.ಸಾ. ಸಂಸ್ಥೆಯ ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣ ನೀಡುವುದು ಈ ಯೋಜನೆಯ ವಿಶೇಷವಾಗಿದೆ. ಮೈಸೂರಿನ ಸುತ್ತಮುತ್ತಲಿನ ಊರುಗಳಿಂದ ಮೈಸೂರಿಗೆ ಬಂದು ಹೋಗುವ ಪ್ರಯಾಣಿಕರಿಗೆ ದೈನಂದಿನ ಪಾಸ್ ವಿತರಿಸುತ್ತಿದ್ದು, ಈ ಪಾಸನ್ನು ಬಳಸಿ ಮೈಸೂರು ಗ್ರಾಮಾಂತರ ಮತ್ತು ಮೈಸೂರು ನಗರ ಸಾರಿಗೆಗಳೆರಡರಲ್ಲೂ ಪ್ರಯಾಣಿಸುವ ವಿಶೇಷ ಯೋಜನೆಯ ಸೌಲಭ್ಯ ಕಲ್ಪಿಸಲಾಗಿದೆ.

17. ಪ್ರಕೃತಿ ವಿಕೋಪದಿಂದಾಗಿ ಎಂಡೋಸಲ್ಫಾನ್ ಸಂತ್ರಸ್ತರಿಗೆ ಹಾಗೂ ಅವರ ಜೊತೆ ಪ್ರಯಾಣಿಸುವ ಒಬ್ಬ ಸಹಾಯಕರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಪ್ರಯಾಣಿಸುವಾಗ ರಾಜ್ಯದ ಸಾರಿಗೆ ಸಂಸ್ಥೆಯ ಪ್ರತಿಷ್ಠಿತ ವಾಹನಗಳನ್ನು ಹೊರತುಪಡಿಸಿ, ಸಾಮಾನ್ಯ ಮತ್ತು ವೇಗದೂತ ಬಸ್ಸುಗಳಲ್ಲಿ ರಾಜ್ಯದೊಳಗೆ ಉಚಿತವಾಗಿ ಪ್ರಯಾಣಿಸಲು ಬಸ್ ಪಾಸ್ ಸೌಲಭ್ಯ ಕಲ್ಪಿಸಲಾಗಿದೆ.

-ಸಹಿ/-

**ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)**